ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 5/12/19

# ಸ್ಥಾಯಿ ಸಮಿತಿ ಚುನಾವಣೆ ಮುಂದಕ್ಕೆ

ಸಂ.ಕ. ಸಮಾಚಾರ ಬೆಂಗಳೂರು

ಉಪಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಪಾಲಿಕೆ ಸದಸ್ಯರು ಅದರಲ್ಲಿ ತೊಡಗಿಸಿಕೊಂಡ ಹಿನ್ನೆಲೆಯಲ್ಲಿ ನಿರೀಕ್ಷೆಯಂತೆ ಬಿಬಿಎಂಪಿ ಸದಸ್ಯರು ಚುನಾವಣೆ ಪ್ರಕ್ರಿಯೆಗೆ ಗೈರಾಗಿದ್ದರಿಂದ ಪಾಲಿಕೆಯ 12 ಸ್ಥಾಯಿ ಸಮಿತಿಗಳ ಚುನಾವಣೆಯನ್ನು ಮುಂದೂಡಲಾಗಿದೆ.

ಬೆಂಗಳೂರಿನ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯಲಿದ್ದು, ಇದ-ರಿಂದಾಗಿ ಬಿಬಿಎಂಪಿ ಸ್ಥಾಯಿ ಸಮಿತಿ ಚುನಾವಣೆ ಮುಂದೂಡಿಕೆಯಾಗಬೇಕು ಎಂಬ ಪಾಲಿಕೆ ಸದಸ್ಯರು ಪ್ರಾದೇಶಿಕ ಆಯುಕ್ತರಿಗೆ ಮನವಿ ಮಾಡಿಕೊಂಡಿದ್ದರು. ಆದರೆ, ಅವರ ಮನವಿಯನ್ನು ತಿರಸ್ಕರಿಸಿದ ಪ್ರಾದೇಶಿಕ ಆಯುಕ್ತರು ನಿಗದಿಯಂತೆ ಡಿ.4ರಂದು ಚುನಾವಣೆ ನಡೆಸಲು ತೀರ್ಮಾನಿಸಿದ್ದರು.

ಆದರೆ, ಬುಧವಾರ ಪುರಭವನದಲ್ಲಿ ನಡೆಯಬೇಕಾಗಿದ್ದ ಸ್ಥಾಯಿ ಸಮಿತಿ ಚುನಾವಣೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ನ ಯಾವುದೇ ಸದಸ್ಯರು ಹಾಜರಾಗಲಿಲ್ಲ. ಚುನಾವಣೆ ನಡೆಯಬೇಕಾದಲ್ಲಿ 1/3ರಷ್ಟು ಸದಸ್ಯರ ಹಾಜರಾತಿ ಇರಬೇಕು. ಆದ-ರೆ, ಯಾವುದೇ ಸದಸ್ಯರು ಹಾಜರಾಗಲಿಲ್ಲ. ಕೆಲವು ಸದಸ್ಯರು ಪುರಭವನದ ಬಳಿಗೆ ಬಂದರೂ ಒಳಗೆ ತೆರಳಲಿಲ್ಲ. ಮೇಯರ್, ಆಡಳಿತ ಹಾಗೂ ಪ್ರತಿಪಕ್ಷದ ನಾಯಕರು ಹಾಗೂ ಕೆಲವು ಮುಖಂಡರು ಮಾತ್ರ ಹಾಜರಾಗಿದ್ದರು. ಚುನಾವಣೆಗೆ ಕೋರಂ ಕೊರತೆ ಎದುರಾದ ಹಿನ್ನೆಲೆಯಲ್ಲಿ ಪ್ರಾದೇಶಿಕ ಆಯುಕ್ತರು ಚುನಾವಣೆಯನ್ನು ಮುಂದೂಡಿದರು. ಆದರೆ, ಮತ್ತೆ ಯಾವಾಗ ಚುನಾವಣೆ ನಡೆಸಬೇಕು ಎಂಬುದನ್ನು ಪ್ರಕಟಿಸಲಿಲ್ಲ.

ಬಿಬಿಎಂಪಿ ಪೌರಸಭಾಂಗಣದ ಬದಲು ಪುರಭವನದಲ್ಲಿ ಸ್ಥಾಯಿ ಸಮಿತಿ ಚುನಾವಣೆ ನಡೆಸಲು ತೀರ್ಮಾನಿಸಿದ್ದು, ಬೆಳಗ್ಗೆ 8ರಿಂದ 9:30ಯ ಅವಧಿಯಲ್ಲಿ 12 ಸ್ಥಾಯಿ ಸಮಿತಿ ಚುನಾವಣೆಗೆ ನಾಮಪತ್ರ ಸಲ್ಲಿಕೆಯಾಗಬೇಕಿತ್ತು. ಬೆಳಗ್ಗೆ 11-30ಕ್ಕೆ ಗಂಟೆಗೆ ಮತದಾನ ನಡೆಸಲು ಪ್ರಾದೇಶಿಕ ಆಯುಕ್ತ ಹರ್ಷ ಗುಪ್ತ ನಿರ್ಧರಿಸಿದ್ದರು. ಆದರೆ, ನಿಗದಿತ ಅವಧಿಯಲ್ಲಿ ಯಾರೂ ಕೂಡ ನಾಮಪತ್ರ ಸಲ್ಲಿಕೆ ಮಾಡಿಲ್ಲ. ಹಾಗೆಯೇ, 198 ಪಾಲಿಕೆ ಸದಸ್ಯರ ಪೈಕಿ ಮೇಯರ್ ಗೌತಮ್ ಕುಮಾರ್ ಜೈನ್, ಆಡಳಿತ ಪಕ್ಷದ ನಾಯಕ ಮುನೀಂದ್ರ ಕುಮಾರ್, ವಿಪಕ್ಷ ನಾಯಕ ಅಬ್ದುಲ್ ವಾಜಿದ್, ಜೆಡಿಎಸ್‌ನ ನೇತ್ರಾ ನಾರಾಯಣ್, ಮಾಜಿ ಮೇಯರ್ ಬಿ.ಎಸ್. ಸತ್ಯನಾರಾಯಣ ಮತ್ತು ಮಾಜಿ ವಿಪಕ್ಷ ನಾಯಕ ಪದ್ಮನಾಭ ರೆಡ್ಡಿ ಮಾತ್ರ ಉಪಸ್ಥಿತರಿದ್ದರು.



ಬಿಬಿಎಂಪಿ 12 ಸ್ಥಾಯಿ ಸಮಿತಿಗಳಿಗೆ ಚುನಾವಣೆ ಪ್ರಕ್ರಿಯೆಯನ್ನು ಪ್ರಾದೇಶಿಕ ಆಯುಕ್ತ ಹರ್ಷ ಗುಪ್ತ ಆರಂಭಿಸಿದ ಸಂದರ್ಭ. ಈ ವೇಳೆ ಬಿಬಿಎಂಪಿ ಆಯುಕ್ತ ಬಿ.ಎಚ್. ಅನಿಲ್ ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಶಿವಮೂರ್ತಿ ಹಾಜರಿದ್ದರು.

## ಚುನಾವಣೆ ಮುಂದೂಡಿದ್ದರಿಂದ ನಷ್ಟ

ಬೆಂಗಳೂರು: ಬುಧವಾರ ನಡೆಯಬೇಕಾಗಿದ್ದ ಸ್ಥಾಯಿ ಸಮಿತಿ ಚುನಾವಣೆ ಮುಂದಕ್ಕೆ ಹೋಗಿದ್ದರಿಂದ ಬಿಬಿಎಂಪಿಗೆ 5 ಲಕ್ಷ ರೂ. ನಷ್ಟವಾಗಿದೆ.

ಬಿಬಿಎಂಪಿ ಕೇಂದ್ರ ಕಚೇರಿ ಶಿವಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವುದರಿಂದ ಉಪ ಚುನಾವಣೆ ಹಿನ್ನೆಲೆಯಲ್ಲಿ ನೀತಿಸಂಹಿತೆ ಜಾ-ರಿಯಾಗಿದ್ದರಿಂದ ಚುನಾವಣೆಯನ್ನು ಪುರಭವನಕ್ಕೆ ಸ್ಥಳಾಂತರಿಸಲಾಗಿತ್ತು. ಪುರಭವನದಲ್ಲಿ ಉಳಿದ ಕಾರ್ಯಕ್ರಮಗಳಿಗೆ 80ರಿಂದ 90 ಸಾವಿರ ರೂ. ಬಾಡಿಗೆ ನೀಡಲಾಗುತ್ತದೆ. ಬಿಬಿಎಂಪಿಗೆ 50 ಸಾವಿರ ರೂ. ಬಾಡಿಗೆ ಇದೆ. ಈ ಬಾಡಿಗೆ ಮೊತ್ತ, ಇನ್ನಿತರ ವೆಚ್ಚಗಳೂ ಸೇರಿದಂತೆ ಪಾಲಿಕೆಗೆ ಅಂದಾಜು 5 ಲಕ್ಷ ರೂ. ನಷ್ಟವಾಗಿದೆ.

ಈ ಮಧ್ಯೆ ಮೂರು ರಾಜಕೀಯ ಪಕ್ಷಗಳ ನಾಯಕರು ಪ್ರಾದೇಶಿಕ ಚುನಾವಣಾ ಆಯುಕ್ತರೇ ನಷ್ಟಕ್ಕೆ ಹೊಣೆ ಎಂದು ದೂರಿದ್ದಾರೆ. ಆದರೆ, ಆಯುಕ್ತರು ನಿಯಮ ಪಾಲನೆ ಮಾಡಿದ್ದೇನೆ. ನಮ್ಮಿಂದ ಯಾವುದೇ ತಪ್ಪಾಗಿಲ್ಲ ಎಂದಿದ್ದಾರೆ.

## ಮುಂದೆ ದಿನಾಂಕ ಪ್ರಕಟ

"ನ.21ರಂದೇ ಚುನಾವಣೆ ನೋಟಿಸ್ ನೀಡಲಾಗಿತ್ತು. ಒಮ್ಮೆ ಘೋಷಣೆ ಮಾಡಿದ ಚುನಾವಣೆಯನ್ನು ಸ್ಥಗಿತ ಮಾಡುವಂತಿರಲಿಲ್ಲ. ನೀತಿ ಸಂಹಿತೆಯಿಂದಾಗಿ ಚುನಾವಣಾ ಆಯೋಗ ಶಿವಾಜಿನಗರ ಕ್ಷೇತ್ರದಿಂದ ಹೊರಗೆ ಚುನಾವಣೆ ನಡೆಸಬಹುದು ಎಂದು ಹೇಳಿತ್ತು. ಈ ಹಿನ್ನೆಲೆಯಲ್ಲಿ ಪುರಭವನದಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಲಾಗಿತ್ತು. ನಗರದ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯುತ್ತಿದೆ. ಡಿ.9ಕ್ಕೆ ಹೊಸ ಶಾಸಕರು ಆಯ್ಕೆಯಾಗಿ ಬರಲಿದ್ದಾರೆ. ಹಾಗಾಗಿ, ಸ್ಥಾಯಿ ಸಮಿತಿ ಚುನಾವಣೆಗೆ ಮತ್ತೆ ಮತದಾರರ ಪಟ್ಟಿ ಪರಿಷ್ಕರಣೆ ಮಾಡಬೇಕಾಗಲಿದೆ. ಜತೆಗೆ ಮತ್ತೆ ಚುನಾವಣೆ ನಡೆಸುವ ಕನಿಷ್ಠ ಒಂದು ವಾರ ಮುನ್ನ ನೋಟಿಸ್ ಜಾರಿ ಮಾಡಬೇಕು. ಈ ಎಲ್ಲ ಪ್ರಕ್ರಿಯೆ ನೋಡಿಕೊಂಡು ಮತ್ತೆ ಚುನಾವಣೆ ನಡೆಸುವ ದಿನಾಂಕ ಪ್ರಕಟಿಸಲಾಗುವುದು."

– ಹರ್ಷಗುಪ್ತ, ಪ್ರಾದೇಶಿಕ ಆಯುಕ್ತ.